ರಾಜ್ಯರಾಜ್ಯಗಳ ನಡುವೆ ಪರಸ್ಪರ ಮಾತುಕತೆಯಿಂದ ಬಗೆಹರಿಯಬೇಕೇ ವಿನಃ ಬೇರೆ ದಾರಿ ಇಲ್ಲ. ಆದುದರಿಂದ ಇದನ್ನು ಪರಾಂಭರಿಸಬೇಕು ಎಂಬ ಮಾತನ್ನು ಹೇಳಿದ್ದಾರೆ. ಅದನ್ನು ನಾನು ಈ ಸದನದ ಮೂಲಕ ತಮಗೆ ತಿಳಿಸಬಯಸುತ್ತೇನೆ.

(ಎ) ಕುಂದಾಪುರ ತಾಲ್ಲೂಕಿನ ಗ್ರಾಮಪಂಚಾಯಿತಿ ನೌಕರರನ್ನು ವಜಾ ಮಾಡಿದ್ದರಿಂದಾಗಿ ಆತ ಆತ್ಮಹತ್ಯೆ ಮಾಡಿಕೊಂಡಿರುವುದು.

ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ): ನಾವು ಮೂರು ಜನ ಕಾಂಗ್ರೆಸ್‌ನವರಿಗೆ ಶೂನ್ಯ ವೇಳೆಯಲ್ಲಿ ಅವಕಾಶ ಕೊಡುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿದಿರಿ. ಇವ್ವೊತ್ತು ನಮ್ಮ ಪಕ್ಷದ ವತಿಯಿಂದ ಒಬ್ಬರೇ ಮಾತನಾಡಿರುವುದು. ನಮಗೆ ಏತಕ್ಕೆ ಅವಕಾಶ ಕೊಡುವುದಿಲ್ಲ? ಏತಕ್ಕೆ ನಾನು ಕಡಿಮೆ ಗಲಾಟೆ ಮಾಡುತ್ತೇವೆ ಎಂದೇ, ತಾವು ಉತ್ತರ ಕೊಡಬೇಕು. ನಾವು ಏನೂ ವ್ಯತಿರಿಕ್ತವಾಗಿ ಹೇಳಿಲ್ಲ. ತಾವು ನಿನ್ನೆ ಏನು ಹೇಳಿದ್ದೀರಿ ಅದಕ್ಕೆ ಮಾತ್ರ ನಾವು ಕೇಳುತ್ತಿದ್ದೇವೆ. ನಿನ್ನೆ ತಾವು ಮೂರು ಜನ ಶಾಸಕರಿಗೆ ಅವಕಾಶ ಕೊಡುತ್ತೇವೆ ಎಂದು ಹೇಳಿದ್ದೀರಿ. ನಾವು ಮೂರು ಜನರೂ ಹೆಸರು ಕೊಟ್ಟಿದ್ದೇವೆ.

ಉಪಾಧ್ಯಕ್ಷರು: ಸಮಯದ ಪ್ರಜ್ಞೆ ಇಟ್ಟುಕೊಂಡು ಮಾತನಾಡಲು ಅವಕಾಶ ಇದೆ.

ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ: ಆ ಸಮಯದ ಪ್ರಜ್ಞೆ ಇರುವುದರಿಂದಲೇ ನಾವು ಕೇಳುತ್ತಿರುವುದು.

ಉಪಾಧ್ಯಕ್ಷರು: ನೀವು ವಿಷಯ ಪ್ರಸ್ತಾಪ ಮಾಡುವುದಕ್ಕೆ ಅರ್ಧರ್ಧ ಗಂಟೆ ತೆಗೆದುಕೊಂಡರೆ ಏನು ಮಾಡುವುದು?

ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ: ತಾವು ಏನು ಹೇಳಿದ್ದೀರಿ, ಅದಕ್ಕೆ ನಾವು ಬದ್ಧರಾಗಿದ್ದೇವೆ.

ಉಪಾಧ್ಯಕ್ಷರು: ನಾಳೆ ಬೆಳಿಗ್ಗೆ ತೆಗೆದುಕೊಳ್ಳೋಣ.

ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ: ನಾಳೆ ನಾವು ಇರುವುದಿಲ್ಲ. ನಾವು ಹೆಚ್ಚಿಗೆ ಏನನ್ನೂ ಕೇಳುತ್ತಿಲ್ಲ. ತಾವೇನು ನಿನ್ನೆ ಆ ಪೀಠದಿಂದ ಮೂರು ಜನ ಕಾಂಗ್ರೆಸ್ ಪಕ್ಷದ ಶಾಸಕರಿಗೆ ಮಾತನಾಡಲು ಅವಕಾಶ ಕೊಡುವುದಾಗಿ ಹೇಳಿದ್ದಿರಿ, ಆ ಹಿನ್ನೆಲೆಯಲ್ಲಿ ನಾವು ಕೇಳುತ್ತಿದ್ದೇವೆ.

ಉಪಾಧ್ಯಕ್ಷರು: ನಾವೇನು ನಿರ್ಣಯ ತೆಗೆದುಕೊಂಡಿರುತ್ತೇವೆ ಅದನ್ನು ತಾವು ಪ್ರಶ್ನೆ ಮಾಡಬಾರದು.

ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ: ತಾವೇನು ಹೇಳುತ್ತೀರಿ ಅದಕ್ಕೆ ನಾವು ಬದ್ದರು.

ಉಪಾಧ್ಯಕ್ಷರು: ಈಗ ಶೂನ್ಯವೇಳೆ ಮುಕ್ತಾಯವಾಗಿದೆ. ಗಮನಸೆಳೆಯುವ ಸೂಚನೆ ತೆಗೆದುಕೊಳ್ಳುತ್ತಿದ್ದೇನೆ. ಶೂನ್ಯವೇಳೆಯೆಂದರೆ ಎಷ್ಟು ಸಮಯದವರೆಗೆ ನಡೆಸಬೇಕು ತಾವೇ ಹೇಳಿ? ಒಬ್ಬರು ಮಾತನಾಡಿದರೆ ಅದರ ಹಿಂದೆ ಹತ್ತು ಮಂದಿ ಮಾತನಾಡುತ್ತಾರೆ. ಹೀಗಾದರೆ ನಾವು ಹೇಗೆ ಸಭೆ ನಡೆಸುವುದು? ಸಹಿ ಮಾಡಿದವರು ಒಬ್ಬರು ಅದರ ಹಿಂದೆ ಮಾತನಾಡುವವರು ಹತ್ತು ಮಂದಿ. ತಾವು ದಯಮಾಡಿ ತಮ್ಮ ಸದಸ್ಯರಿಗೆ ಹೇಳಬೇಕು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅದಕ್ಕೆ ಅವಕಾಶ ಕೊಡಬೇಡಿ. ನಮ್ಮ ಸದಸ್ಯರಾರೂ ಮಾತನಾಡಿಲ್ಲ.

ಉಪಾಧ್ಯಕ್ಷರು: ತಾವು ಎಂದರೆ ವಿರೋಧ ಪಕ್ಷದ ಎಲ್ಲಾ ಸದಸ್ಯರು ಒಳಪಡುತ್ತಾರೆ. ಇಲ್ಲಿ ಶೂನ್ಯವೇಳೆಯನ್ನು ಹೆಚ್ಚಾಗಿ ಬಳಸಿಕೊಳ್ಳುವವರು ವಿರೋಧ ಪಕ್ಷದವರು.

ಶ್ರೀ ಎಂ.ಮಲ್ಲೀಕಾರ್ಜುನ ಖರ್ಗೆ: ನಮಗೆ ನಿನ್ನೆ ಕಾಂಗ್ರೆಸ್ ಪಕ್ಷದಿಂದ ಮೂರು ಜನರ ಹೆಸರು, ಬಿ.ಜೆ.ಪಿ.ಯಿಂದ ಮೂರು ಜನರ ಹೆಸರು ಕೊಡಿ, ನೀವು ಯಾರ ಹೆಸರು ಕೊಡುತ್ತೀರಿ ಅವರಿಗೆ ಮಾತ್ರ ಮಾತನಾಡಲು ಕರೆಯುತ್ತೇವೆಂಬ ಸೂಚನೆ ಬಂದಿತ್ತು. ಆ ಮೂರು ಜನರ ನೋಟಿಸನ್ನು ತೆಗೆದುಕೊಂಡು ಕಾರ್ಯದರ್ಶಿಯವರಿಗೆ ಕಳುಹಿಸಲಾಯಿತು. ಇದರಲ್ಲಿ ತಾವು ಕೇವಲ ಕುನ್ನೂರವರನ್ನೊಬ್ಬರನ್ನು ಮಾತನಾಡಲು ಕರೆದಿರಿ. ಪ್ರತಾಪಚಂದ್ರ ಶೆಟ್ಟಿ ಮತ್ತು ಬಸಪ್ಪನವರು ಹಾಗೆಯೇ ಉಳಿದರು. ಮೂರು ಜನರ ಹೆಸರನ್ನು ಮಾತ್ರ ಕೊಡಬೇಕೆಂದು ಹೇಳಿದ್ದರು. ಅದರಂತೆ ಮೂರು ಜನರ ಹೆಸರನ್ನು ಮಾತ್ರ ಕೊಟ್ಟಿದ್ದೆವು. ಆ ಮೂರು ಜನರನ್ನು ಮೊದಲು ಕರೆಯದೆ ಬೇರೆ ಸದಸ್ಯರನ್ನು ಕರೆದರೆ ತಾವ್ಯಾಕೆ ಆ ರೀತಿ ಕರೆದಿರಿಯೆಂದು ನಾವು ಕೇಳುವಂತಿಲ್ಲ. ನೀವು ನ್ಯಾಯದ ಪ್ರಕಾರ ಯಾರಿಗೆ ಪ್ರಾಧಾನ್ಯತೆ ಕೊಡಬೇಕು ಅದನ್ನು ಕೊಡುವುದಿಲ್ಲ. ಹೀಗಿದ್ದರೆ ನಾವೇನು ಮಾಡಬೇಕು?

ಉಪಾಧ್ಯಕ್ಷರು: ತಾವು ಕೇವಲ ಶೂನ್ಯವೇಳೆಯಲ್ಲೇ ಎಲ್ಲವನ್ನು ಚರ್ಚೆ ಮಾಡೋಣವೆಂದರೆ ನಮ್ಮ ತಕರಾರಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನಾವು ತಾವು ಹೇಳಿದಂತೆ ನ್ಯಾಯವಾಗಿ ನಡೆದುಕೊಂಡರೂ ಸಹ ಆ ಸದಸ್ಯರಿಗೇಕೆ ಅವಕಾಶ ಸಿಗಲಿಲ್ಲ?

ಉಪಾಧ್ಯಕ್ಷರು: ಅಧ್ಯಕ್ಷರು ಒಂದು ಪಟ್ಟಿ ಮಾಡಿಕೊಟ್ಟಿದ್ದರು, ಅದರ ಪ್ರಕಾರ ಕರೆದಿದ್ದೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅಧ್ಯಕ್ಷರ ಪ್ರಕಾರವೇ ನಾವು ಮೂರು ಜನರ ಹೆಸರನ್ನು ಕಳುಹಿಸಿಕೊಟ್ಟಿದ್ದು. ಅದರಲ್ಲಿ ಒಬ್ಬರನ್ನು ಕರೆದಿದ್ದೀರಿ, ಇನ್ನಿಬ್ಬರನ್ನು ಕರೆದಿಲ್ಲ.

ಉಪಾಧ್ಯಕ್ಷರು: ಈಗ ಒಬ್ಬರು ಮಾತನಾಡಿದ್ದಾರೆ, ಇನ್ನಿಬ್ಬರಿಗೆ ಎರಡೆರಡು ನಿಮಿಷ ಕೊಡುತ್ತೇನೆ.

(ಎ) ಕುಂದಾಪುರ ತಾಲ್ಲೂಕಿನ ಗ್ರಾಮ ಪಂಚಾಯಿತಿ ನೌಕರನನ್ನು ವಜಾ ಮಾಡಿದ್ದರಿಂದ ಆತ್ಮ ಹತ್ಯೆ ಮಾಡಿ ಕೊಂಡಿರುವುದು

ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ): ಮಾನ್ಯ ಉಪಾಧ್ಯಕ್ಷರೆ, ಗ್ರಾಮೀಣಾಭಿವೃದ್ಧಿ ಸಚಿವರ ಗಮನಕ್ಕೆ ತರುವುದೇನೆಂದರೆ, ಕುಂದಾಪುರ ತಾಲ್ಲೂಕಿನ ಅವಮಾಸ ಬಯಲು ಗ್ರಾಮಪಂಚಾಯಿತಿಯಲ್ಲಿ 26-4-89ರಂದು ಪರಿಶಿಷ್ಟ ಪಂಗಡದ ರಾಜು ನಾಯಕ್ ಎಂಬುವವರನ್ನು ದಿನಗೂಲಿ ನೌಕರರನ್ನಾಗಿ ನೇಮಕ ಮಾಡಿಕೊಳ್ಳುತ್ತಾರೆ. ಆ ನೌಕರರಿಗೆ 'ಡಿ' ದರ್ಜೆ ನೌಕರರಿಗೆ ಸಿಗತಕ್ಕ ಸಂಬಳವನ್ನು ಕೊಟ್ಟಿರುತ್ತಾರೆ. ಅವನು ಮದ್ಯಪಾನ ಮಾಡಿಕೊಂಡು ಬಂದಿದ್ದಾನೆಂದು 27-2-1997ರಂದು ಮೂರು ದಿವಸಗಳ ನೋಟಿಸ್ ಕೊಟ್ಟು ಕೆಲಸದಿಂದ ವಜಾ ಮಾಡುತ್ತಾರೆ. ಆ ಸಂದರ್ಭದಲ್ಲಿ ಆ ನೌಕರ ಅದೇ ಪಂಚಾಯಿತಿ ಕಛೇರಿಯಲ್ಲಿ ವಿಷ ಕುಡಿದು ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ಅವನ ಮೂರು ಹೆಣ್ಣುಮಕ್ಕಳು ಬೀದಿಪಾಲಾಗಿದ್ದಾರೆ. ಸರ್ಕಾರದಿಂದ ಕಾನೂನು ಬದ್ಧವಾಗಿ ಕೊಡಬೇಕಾದ ಸೌಲಭ್ಯವನ್ನು ಅವನ ಹೆಂಡತಿಯವರಿಗೆ ಕೊಡಬೇಕು. ಮತ್ತು ಅದೇ ಗ್ರಾಮಪಂಚಾಯಿತಿಯಲ್ಲಿ ಅವನ ಕುಟುಂಬದವರಿಗೆ ಒಂದು ಉದ್ಯೋಗವನ್ನು ಕೊಡಿಸಬೇಕೆಂದು ನನ್ನ ಕಳಕಳಿಯ ಮನವಿ. ಮತ್ತೊಂದು ವಿಚಾರ, ಶೂನ್ಯವೇಳೆಯಲ್ಲಿ ನಾನು ನಿನ್ನೆ ದಿವಸ ಎತ್ತಿದ ವಿಚಾರದ ಬಗ್ಗೆ ಅವರು ಉತ್ತರಕೊಡಬೇಕಾಗಿದೆ.

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಇಲ್ಲಿ ಮಾನವೀಯವಾಗಿ ನೋಡಬೇಕಾಗಿದೆ. ಆ ನೌಕರ ಆತ್ಮಹತ್ಯೆ ಮಾಡಿಕೊಂಡಿದ್ದಾರೋ ಅಥವಾ ಮತ್ಯಾವುದಾದರೂ ಕಾರಣವಿದೆಯೋ ಗೊತ್ತಿಲ್ಲ. ಮಾನ್ಯ ಸದಸ್ಯರೇ ಪ್ರಸ್ತಾಪ ಮಾಡಿರುವಂತೆ ಆ ವ್ಯಕ್ತಿ ಪಂಚಾಯಿತಿ ನೌಕರ. ಪಂಚಾಯಿತಿ ನೌಕರರು ಸರ್ಕಾರಿ ನೌಕರರಲ್ಲ. ಪಂಚಾಯಿತಿಯ ನೌಕರರಿಗೆ ನಿಯಮದ ಪ್ರಕಾರ ಕೊಡಬೇಕಾದ ಸೌಲಭ್ಯಗಳನ್ನು ಗ್ರಾಮಪಂಚಾಯಿತಿಯವರೆ ಕೊಡಬೇಕು. ಅನುಕಂಪದ ಆಧಾರದ ಮೇಲೆ ಅವರ ಕುಟುಂಬದವರಿಗೆ ನೇಮಕ ಮಾಡಿಕೊಳ್ಳುವುದಾಗಿದ್ದರೆ ನಾವು ಸಹ ಗ್ರಾಮಪಂಚಾಯಿತಿಯ ಮೇಲೆ ಒತ್ತಡವನ್ನು ಮುಖ್ಯಕಾರ್ಯನಿರ್ವಾಹಕ ಅಧಿಕಾರಿಯಿಂದ ತರುತ್ತೇವೆ. ತಾವೂ ಸಹ ಪ್ರಯತ್ನ ಮಾಡಿ ಗ್ರಾಮಪಂಚಾಯಿತಿಯಲ್ಲಿ ಅನುಕಂಪದ ಆಧಾರದ ಮೇಲೆ ನೇಮಕ ಮಾಡಿಕೊಳ್ಳುವುದಿದ್ದರೆ ಈ ಕುಟುಂಬ ಸದಸ್ಯರಿಗೆ ನೇಮಕಾತಿ ಮಾಡಿಕೊಳ್ಳಲು ತಮ್ಮ ಪತ್ರದ ಮೇಲೆ ನಾವು ಬರೆದು ಕಳುಹಿಸುತ್ತೇವೆ. ತಾವೂ ಪ್ರಭಾವವನ್ನು ಉಪಯೋಗಿಸಿದರೆ ಅದು ಸಾಧ್ಯವಾಗಬಹುದೆಂದು ನಾನು ಭಾವಿಸಿದ್ದೇನೆ.